


ನೆಗೊಂಬೊ ತನ್ನ 'ಸಾಮಗ್ರಿ'ಯನ್ನು ಮತ್ತೆ ನೋಡುತ್ತಾ 'ಈ ಕಣ್ಣು ಕಾಯಿಲೆ ಬಂದಿರುವ ಹುಡುಗಿಗೆ ಮದುವೆ ಆಗಿಲ್ಲ. ಆದರೆ ಆಕೆ ಸದ್ಯದಲ್ಲೇ ಮದುವೆ ಆಗುವವಳಿದ್ದಾಳೆ' ಎಂದ. ನಂತರ ಆತ ಅವಳ ಬಗ್ಗೆ, ಅವಳ ತಂದೆ ಬಗ್ಗೆ ಹೊಗಳುತ್ತಾ, 'ಆಕೆ ಇವತ್ತು ನನ್ನ ಮನೆಗೆ ಬರಲಿ, ಇಲ್ಲದಿದ್ದರೆ ಅವಳು ಸಾಯುತ್ತಾಳೆ' ಎಂದು ಹೇಳಿದ. 'ಈಗ ನೀವು ನನ್ನ ಆಶೀರ್ವಾದವನ್ನು ತೆಗೆದುಕೊಂಡು ಹೋಗಲು ಬಂದಿದ್ದೀರಿ; ನೀವು ಈಗ ಹೋಗಿ. ನಾಳೆ ಅವಳ ಗಂಡನಾಗುವವನ ಬಳಿಗೆ ಅವಳನ್ನು ಕರೆದುಕೊಂಡು ಹೋದರೆ ಮಾತ್ರ ಅವಳು ಬದುಕುತ್ತಾಳೆ' ಎಂದು ಆತ ಅವರಿಗೆ ಹೇಳಿದನು.

ದೂತರು ಮರಳಿ ಸೂರ್ಯದೇವನ ಹತ್ತಿರ ಹೋಗಿ ನೆಗೊಂಬೊ ಹೇಳಿದ ವಿಷಯವನ್ನು ತಿಳಿಸಿದರು. ಆಗ ಸೂರ್ಯದೇವ ಅವರಿಗೆ, 'ನೀವು ಈಗ ವಿಶ್ರಾಂತಿ ಮಾಡಿ. ಮಗಳನ್ನು ನಾಳೆ ಅಲ್ಲಿಗೆ ಕರೆದುಕೊಂಡು ಹೋಗೋಣ' ಎಂದು ಹೇಳಿದನು.

ಅಲ್ಲೇ ಮೂಲೆಯಲ್ಲಿ ಅವಿತು ಕೂತಿದ್ದ ಕಪ್ಪೆ ಅವರ ಈ ಮಾತುಕತೆಗಳನ್ನೆಲ್ಲಾ ಕೇಳಿಸಿಕೊಂಡಿತ್ತು. ಮಾರನೆಯ ದಿನ ಕಪ್ಪೆ ಮತ್ತೆ ಆ ಖಾಲಿ ಕೊಡದೊಳಕ್ಕೆ ಹೋಗಿ ಕುಳಿತುಕೊಂಡಿತು. ಮತ್ತೆ ಆ ಹುಡುಗಿಯರು ಕೊಡಗಳನ್ನು ತೆಗೆದುಕೊಂಡು ಬಾವಿಗೆ ಬಂದರು. ಅವರು ಕೊಡವನ್ನು ಬಾವಿಗೆ ಬಿಟ್ಟ ತಕ್ಷಣ ಕಪ್ಪೆ ಕೊಡದಿಂದ ನೆಗೆದು ನೀರಿನ ತಳದಲ್ಲಿ ಅವಿತುಕೊಂಡಿತು. ನಂತರ ಆ ಹುಡುಗಿಯರು ತಮ್ಮ ಕೊಡಗಳಲ್ಲಿ ನೀರನ್ನು ತುಂಬಿಸಿಕೊಂಡು ಆಗಸಕ್ಕೆ ಮರಳಿದರು.

ಸೂರ್ಯದೇವನ ಜೇಡನಿಗೆ, 'ನೀನು ಈಗ ಒಂದು ದೊಡ್ಡ ಬಲೆಯನ್ನೆ ನೇಯಬೇಕು; ನಾವು ನಮ್ಮ ಮಗಳನ್ನು ಭೂಮಿಗೆ ಕರೆದುಕೊಂಡು ಹೋಗಬೇಕು' ಎಂದು ಹೇಳಿದನು.

ಜೇಡ ಬಲೆಯನ್ನು ನೇಯುತ್ತಿರುವಾಗ, ಕಪ್ಪೆ ಬಾವಿಯಿಂದ ಕಿಮನ್ಯೂಜ್‌ನ ಮಗನ ಹತ್ತಿರ ಹೋಗಿ, 'ಮಹಾಪ್ರಭು, ನಿಮ್ಮ ರಾಣಿ ಇಂದು ನಿಮ್ಮ ಮನೆಗೆ ಬರಲಿದ್ದಾಳೆ' ಎಂದು ಹೇಳಿತು.

ಆತ ಅದಕ್ಕೆ, 'ನೀನು ಸುಳ್ಳು ಹೇಳುತ್ತಿದ್ದೀಯ ಕಪ್ಪೆ!' ಎಂದು ಬಿರುಸಾಗಿಯೇ ಹೇಳಿದ.

'ಇಲ್ಲ. ಮಹಾಪ್ರಭು ನಾನು ಸತ್ಯವನ್ನು ಹೇಳುತ್ತಿದ್ದೇನೆ. ಇಂದು ಸಂಜೆಯೇ ನಾನು ನಿಮ್ಮ ರಾಣಿಯನ್ನು ಕರೆದುಕೊಂಡು ಬರುತ್ತೇನೆ' ಎಂದು ಹೇಳಿ ಬಾವಿಗೆ ಮರಳಿತು ಕಪ್ಪೆ.

ಸಂಜೆ ಹೊತ್ತಿಗೆ ಸೂರ್ಯದೇವ ತನ್ನ ಮಗಳನ್ನು ಜೇಡನ ಬಲೆಯ ದಾರದ ಮೂಲಕ ಆಗಸದಿಂದ ಕರೆದುಕೊಂಡು ಬಂದು ಭೂಮಿಯಲ್ಲಿದ್ದ ಆ ಬಾವಿಯ ಬಳಿ ಬಿಟ್ಟು ಹೋದನು. ಕಪ್ಪೆಯು ನೀರಿನಿಂದ ಈಚೆಗೆ ಬಂದು ಆ ಯುವತಿಗೆ 'ನಾನು ನಿನ್ನ ಮಾರ್ಗದರ್ಶಕ. ನಿನ್ನನ್ನು ನಿನ್ನ ಒಡೆಯನ ಬಳಿ ಈಗ ಕರೆದುಕೊಂಡು ಹೋಗುತ್ತೇನೆ' ಎಂದು ಹೇಳಿ ಅವಳ ಕಣ್ಣುಗಳಿಗೆ ದೃಷ್ಟಿಯನ್ನು ಮತ್ತೆ ಮರಳಿಸಿತು. ನಂತರ ಕೂಡಲೇ ಅವಳನ್ನು ಕಿಮನ್ಯೂಜ್‌ನ ಮಗನ ಬಳಿಗೆ ಕರೆದುಕೊಂಡು ಹೋಯಿತು.

'ನೋಡಿ ಮಹಾಪ್ರಭು! ನಿಮ್ಮ ರಾಣಿಯನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದೇನೆ' ಎಂದು ಕಪ್ಪೆ ಹೇಳಿತು. 'ಸುಸ್ವಾಗತ, ಮೈನು, ಕಪ್ಪೆ' ಎಂದು ಕಪ್ಪೆಯನ್ನು ಆತ ಸ್ವಾಗತಿಸಿದನು.

ಅನಂತರ ಆತ ಸೂರ್ಯದೇವ ಮತ್ತು ಚಂದ್ರಮರ ಮಗಳನ್ನು ತನ್ನ ತಂದೆ ತಾಯಿಯ ಸಮ್ಮುಖದಲ್ಲಿ ಮದುವೆಯಾಗಿ ಜೀವನ ನಡೆಸಿದನು.

●